**ಸಾಕ್ಷಿಯನ್ನು ದಿನಾಂಕಃ 03-07-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

ಪಾಟೀಸವಾಲುಃ **2** ಮತ್ತು**4** ನೇ ಪ್ರತಿವಾದಿ ಪರ ಶ್ರೀ. ಟಿ.ಅರ್.ಎ. ವಕೀಲರವರಿಂದಃ

ನನ್ನ ಸಂಪೂರ್ಣ ಹೆಸರು ಕೋವಿ ರೇವಣಸಿದ್ದಪ್ಪ. ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ಹೆಸರನ್ನು ಕೋವಿ ರೇವಣಸಿದ್ದಪಪ ಎಂದು ಬೆರೆಸಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರು ಮಾಡಲು ಮಾಹಿತಿಯನ್ನು ನಾನು ವಾದಿಗೆ ನೀಡಿದ್ದೇನೆ. ನನಗೆ ಅದರಲ್ಲ ಬರೆದಿರುವ ವಿಚಾರಗಳು ಗೊತ್ತಿವೆ. ಸಾಕ್ಷಿ ಪ್ರಮಾಣ ಪತ್ರವನ್ನು ನನ್ನ ವಕೀಲರು ಬರೆದಿರುವರು. ಆ ಪ್ರಮಾಣ ಪತ್ರವನ್ನು ಬರೆಯುವಾಗ ಮಾಹಿತಿಯನ್ನು ವಕೀಲರೇ ನೀಡಿರುವರು. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಪರಿಚಯವಿದೆ ಎಂಬ ಸಹಿಯನ್ನು ಯಾರು ಮಾಡಿರುವರು ಎಂದು ನನಗೆ ಹೇಳಲಾಗುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲ ಕಂಡು ಬರುವ ಸೀಲುಗಳನ್ನು ಯಾರು ಹಾಕಿರುವರು ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ಮನೆತನ ಅರ್ದಿಕ ಪರಿಸ್ತಿತಿಯ ಬಗ್ಗೆ ನನಗೆ ಗೊತ್ತಿದೆ. ಸಿದ್ದಮ್ಮನ ಗಂಡ ಸುಬಾಷ ಚಂದನು ವ್ಯವಯಸಾ ಮಾಡುತ್ತಿದ್ದನು. ಸದರಿ ಸುಬಾಷ ಚಂದ್ರ ಇವರು ಮರಳು ಸಿದ್ದೇಶ್ವರ ಎಂಬ ಬಸ್ಸನ್ನು ನಡೆಸುತ್ತಿದ್ದರು ಅಂದರೆ ಸರಿ. ಸದರಿ ಬಸ್ಸು ದಾವಣೆಗೆರೆ ಮಡ್ರಿಹಳ್ಳಿ ಮತ್ತು ಉಜ್ಜೆನಿ ಮಾರ್ಗದಲ್ಲಿ ಚಲಿಸುತ್ತಿತ್ತು. ಅವರು ಆ ಬಸ್ಸನ್ನು ಕೊಟ್ಟೂರಿನಿಂದ ಹಗರಿಬೊಮ್ಮನ ಹಳ್ಳಿಗೆ ಓಡಿಸುತ್ತಿದ್ದರು ಅಂದರೆ ಸರಿ. ಅವರು ಯಾವತ್ತೂ ಬಸ್ಸನ್ನು ದಾವಣೆಗೆರೆ ಓಡಿಸುತ್ತಿರಲಿಲ್ಲ ಅಂದರೆ ನನಗೆ ಗೊತ್ತಿಲ್ಲ. ಆ ಬಸ್ಸಿನ ಏಜೆಂಟ್ ಆಗಿ ಯಾರು ಕಾರ್ಯ ನಿರ್ವಹಿಸುತ್ತಿದ್ದರು ಅಂದರೆ ನನಗೆ ಗೊತ್ತಿಲ್ಲ. 1 ನೇ ವಾದಿ ಸಿದ್ದಮ್ಮ ಸಹೋದರರು ನನಗೆ ಪರಿಚಯ ಇರುವರು ಅವರು ನಾಗರಾಜ ಮತ್ತು ಸಿದ್ದಪ್ಪ ಎಂದು ಇರುವರು. ಆಕೆಗೆ ಮೂರು ಜನ ಸಹೋದರರು ಇರುವರು. ಸಿದ್ದಮ್ಮಳಿಗೆ ಒಬ್ಬಾಕಿ ಸಹೋದರಳು ಇರುವರು. ಸಿದ್ದಮ್ಮ ಮೂರು ಜನ ಸಹೋದರರು ಮೇಲೆ ಹೇಳಿದ ಬಸ್ಸಿನ ಎಂಟಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು ಅಂದರೆ ನನಗೆ ಗೊತ್ತಿಲ್ಲ. ಅವರ ಮಿಸ್ ಮ್ಯಾನೇಜಿಮೆಂಟಿನಿಂದ ಸುಬಾಷ ಚಂದ್ರ ಇವರಿಗೆ ನಷ್ಟ ಆಯಿತು ಅಂದರೆ ನನಗೆ ಗೊತ್ತಿಲ್ಲ. ಸುಬಾಷಚಂದ್ರ ಇವರು ಚಂದ್ರಪ್ಪ ಇವರ ಹತ್ತಿರ 10 ಲಕ್ಷ

ಹಾಗೂ ಲೊಕಪ್ಪನ ಹತ್ತಿರ 1 ಲಕ್ಷ, ಗೌಡಪ್ಪನ ಹತ್ತಿರ 1 ಲಕ್ಷ ಹಾಗೂ ನಾಗರಾಜನ ಹತ್ತಿರ 1 ಲಕ್ಷ ಸಾಲ ಪಡೆದಿದ್ದನು ಉಳಿದಂತೆ ಬೆರೆಯವರಿಂದಲೂ ಸಾಲ ಪಡೆದಿದ್ದನು ನನಗೆ ಅವುಗಳ ವಿವರ ಗೊತ್ತಿರುವುದಿಲ್ಲ. ಆತನು ಮಾಡಿದ ಸಾಲವನ್ನು ತೀರಿಸಲು ದಾವಾ ಸ್ವತ್ತನ್ನು ಸುಬಾಷ ಚಂದ್ರ ಮತ್ತು ಅತನ ತಾಯಿ ಸೇರಿಕೊಂಡು ಮಾರಾಟ ಮಾಡಿದ್ದರು ಅಂದರೆ ಇರಬಹುದು. ಸಿದ್ದಮ್ಮಳಿಗೆ ತಿಂಗಳಿಗೆ 70-80 ಸಾವಿರ ಸಂಬಳ ಇರಬಹುದು. ಆಕೆ 1 ರಿಂದ 5 ನೇ ತರಗತಿಯ ವರೆಗೆ ಪಾಟ ಮಾಡುವಳು. ಆಕೆಯ ಸಂಬಂಳಕ್ಕೆ ಸಂಬಂದಿಸಿದಂತೆ ನಾನು ದಾಖಲೆ ನೋಡಿರುವುದಿಲ್ಲ. ಆಕೆ ಪ್ರಥಮವಾಗಿ ಯಾವ ಶಾಲೆಯಲ್ಲಿ ಶಿಕ್ಷಕಿಯಾಗಿ ನೇಮಕಾವಾದಳು ಎಂದು ನನಗೆ ಗೂತ್ತಿರುವುದಿಲ್ಲ. ಆಕೆ ಆರಂಭದಲ್ಲಿ ಜಗಳೂರು ತಾಲೂಕಿನ ತುಪ್ಪದಹಳ್ಳಿಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದ್ದಳು ಅಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಆಕೆ ತನ್ನ ತವರು ಮನೆಯಲ್ಲಿ ವಾಸ ಇದ್ದಳು ಅಂದರೆ ಸರಿಯಲ್ಲ. ಆಕೆ ಬೇರೆ ಮನೆ ಮಾಡಿದ್ದಳು ಎಂದು ಸಾಕ್ಷಿ ಮುಂದುವರೆದು ನುಡಿದರು. ಆ ಬಗ್ಗೆ ದಾಖಲೆಯನ್ನು ನಾನು ನೋಡಿರುವುದಿಲ್ಲ. ನನಗೆ ಆಕೆ ಯಾರ ಮನೆಯಲ್ಲಿ ಬಾಡಿಗೆಗೆ ಇದ್ದಳು ಎಂದು ನನಗೆ ಗೊತ್ತಿಲ್ಲ. ತದನಂತರದಲ್ಲಿ ಆಕೆ ಮಾಚಿಕೇರಿಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಳು ಅಂದರೆ ಸರಿ. ಈಗ ಅಕೆ ಸೊಕ್ಕೆಯಲ್ಲಿ ಒಟ್ಟು ಕುಟುಂಬದಲ್ಲಿ ವಾಸ ಇರುವಳು ಅಂದರೆ ಸರಿಯಲ್ಲ. ಆಕೆ ಬೇರೆ ವಾಸ ಮಾಡುತ್ತಿರುವಳು. ಸೊಕ್ಕೆಯಲ್ಲಿ ಆಕೆ ಬಾಡಿಗೆ ಮನೆಯಲ್ಲಿ ವಾಸವಿದ್ದು ಅದರ ಮಾಲೀಕರು ಯಾರ ಎಂದು ನನಗ ಗೊತ್ತಿಲ್ಲ. ಸಿದ್ದಮ್ಮ ಯಾವತ್ತೂ ಕಡಬಗೇರಿ ಗ್ರಾಮದ ಖಾಯಂ ನಿವಾಸಿಯಾಗಿರಲಿಲ್ಲ ಅಂದರೆ ಸರಿಯಲ್ಲ. ಆಕೆ ಕಡಬಗೇರಿ ಹೋಗಿ ಬಂದು ಮಾಡುವಳು ಅಂದರೆ ಸರಿ. ಖರೀದಿ ಪತ್ರವನ್ನು ಯಾರು ಯಾವಗ ಯರ ಹೆಸರಿನಲ್ಲಿ ಸೃಷ್ಟಿ ಮಾಡಿದರು ಎಂದು ನನಗೆ ಗೊತ್ತಿರುವುದಿಲ್ಲ. ಸುಬಾಷ ಚಂದ್ರ ಮರಣ ಹೊಂದಿಗೆ 9 ವರ್ಷಗಳ ನಂತರ ದಾಖಲೆಗಳು ಸೃಷ್ಟಿಯಾಗಿರುತ್ತವೆ. 2 ನೇ ಪ್ರತಿವಾದಿ ಯಾವುದೇ ಖರೀದಿ ಪತ್ರಕೂ ಸಹಿ ಮಾಡಿರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹಿತ 2 ನೇ ಪ್ರ 2 ವಾದಿ ಖರೀದಿ ಪತ್ರಗಳನ್ನು ಸೃಷ್ಟಿ ಮಾಡಿರುವವರು ಎಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ಖರೀದಿ ಪತ್ರ ಸೃಷಿಗೊಂಡ ವಿಚಾರ ನನಗೆ ಬೆಂಗಳೂರಿನಲ್ಲಿರುವ

ಕರಿಬ್ಬಸಪ್ಪ ಇವರಿಂದ ಗೊತ್ತಾಯಿತು. ಈ ದಾವೆಯನ್ನು ಯಾವ ಪರಿಹಾರಕ್ಕಾಗಿ ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಜಮೀನಿನಲ್ಲಿ ಕೊರು ಮಾಡಿ ಅದರಲ್ಲಿ ರೂ 8 ಸಾವಿರವನ್ನು 1 ನೇ ಪ್ರತಿವಾದಿಗೆ ಕೊಡುತ್ತೇನೆ. ಆ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನಾನು 1 ನೇ ಪ್ರತಿವಾದಿಗೆ ಯಾುವುದೇ ಹಣ ವನ್ನು ಯಾವತ್ತೂ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಶಾವಮ್ಮನ ಸುಬರ್ದಿಯಲ್ಲಿ ಇರಲಾದ ಜಮೀನಿನ ಸರ್ವೆ ನಂಬರು ನನಗೆ ಗೊತ್ತಿಲ್ಲ. ಶಾವಮ್ಮನ ಸುಬರ್ದಿಯಲ್ಲಿ ಇನ್ನೊಂದು ಜಮೀನು ಇದೆ ಎಂದು ಸುಳ್ಳಾಗಿ ಬರೆಸಿದ್ದೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಈಗ ಶಾಮನೂರಿನಲ್ಲಿರುವ 2 ನೇ ಪ್ರತಿವಾದಿಯ ಮನೆಯಲ್ಲಿ ವಾಸಇರುವಳು ಅಂದರೆ ಸರಿ. 1 ನೇ ಪ್ರತಿವಾದಿ ಯಾವತ್ತೂ 1 ನೇ ಸಿದ್ದಮ್ಮ ಜೊತೆ ವಾಸ ಇರಲಿಲ್ಲ ಅಂದರೆ ಸರಿ. ಸಿದ್ದಮ್ಮ ಹಾಗೂ ನಾನು ವಿಶ್ವಾಸಿಕರು ಅಂದರೆ ಸರಿ. ಸುಬಾಷ ಚಂದ್ರ ಹಾಗೂ ಆತನ ತಾಯಿ ಸಾಲವನ್ನು ತೀರಿಸಲು 2 ನೇ ದಾವಾ ಅಸ್ತಿಯನ್ನು 4 ನೇ ಪ್ರತಿವಾದಿಗೆ ಸುಬಾಷ ಚಂದ್ರನ ಜೀವಿತಾ ಅವದಿಯಲ್ಲಿ ಮಾರಾಟ ಮಾಡಿರುವರು ಅಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

<u>ಪಾಟೀ ಸವಾಲುಃ **1** ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುವರು**.**</u>

**ನ್ಯಾಯಾಲಯದ ಬೆಳಗಿನ ಅವದಿ ಮುಗಿದ ಕಾರಣ ಮದ್ಯಾಹ್ಣಕ್ಕೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

03-07-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

<u>ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಪಾಟೀಸವಾಲುಃ **3** ನೇ ಪ್ರತಿವಾದಿ ಪರ ಶ್ರೀ. ಬಿ.ಹೆಚ್. ವಕೀಲರವರಿಂದಃ</u>

1 ನೇ ವಾದಿಯ ಗಂಡ ಸುಬಾಷ ಚಂದ ಏನು ವಿದ್ಯಾಭ್ಯಾಸ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಸುಬಾಷಚಂದ್ರ ನನ್ನ ಸ್ನೆಹೀತನಾಗಿದ್ದನು. 1 ಮತ್ತು 2 ನೇ ಪ್ರತಿವಾದಿಗಳು ನನ್ನ ದೂರದ ಸಂಬಂದಿಕರು ಎಂದು ನಾನು ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಈ ದಾವೆಯನ್ನು ವಾದಿಯು ನಾವು ಮಾಡುವ ಹೊಲದ ಮೇಲೆ ಹಾಕಿರುವರು. ನನಗೆ ನಾವು ಮಾಡುವ ಹೊಲದ ಸರ್ವೆ ನಂಬರು ಗೊತ್ತಿರುವುದಿಲ್ಲ. ಅದರ ವಿಸ್ತಿರ್ಣ 3 ಎಕರೆ 40 ಸೆನ್ಸ ಇರುವುದು. ಸುಬಾಷ ಚಂದ್ರನು ತನ್ನ ಜೀವಿತಾ ಅವದಿಯಲ್ಲಿ ಕುಟುಂಬಕ್ಕೆ ಸಂಬಂದಿಸಿದಂತೆ ಮಾಡಿರುವ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಿದ್ದಮ್ಮ ಶಿಕ್ಷಕಿಯಾಗಿದ್ದಳು ಅಂದರೆ ಸರಿ. ಆ ಸಮಯದಲ್ಲಿ ಸುಬಾಷ ಚಂದ್ರ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಅಂದರೆ ಸರಿ. ಆತನಿಗೆ ದುಡಿಯಲು ವ್ಯವಸ್ತೆ ಮಾಡಿಕೊಡಬೇಕೆಂದು 1 ನೇ ವಾದಿ ಅಂದುಕೊಂಡಿದ್ದರು ಅಂದರೆ ಸರಿ. ಸಿದ್ದಮ್ಮ ತನ್ನ ಸಹೋದರರ ವಿದ್ಯಾಭ್ಯಾಸಕ್ಕಾಗಿ ಅನೇಕ ಕಡೆ ಸಾಲ ಮಾಡಿದ್ದಳು ಅಂದರೆ ಸರಿಯಲ್ಲ. ಕ್ಯಾತಪ್ಪನನವರ ಚಂದ್ರಪ್ಪನ ಬಳಿ ಸುಬಾಷ ಚಂದ್ರ ಇವರು ಸಾಲ ಮಾಡಿದ್ದರು. ಆತನ ಬಳಿ 1 ನೇ ವಾದಿ ಸಿದ್ದಮ್ಮ ಸಾಲ ಮಾಡಿದ್ದಳು ಅಂದರೆ ಸರಿಯಲ್ಲ. 1 ನೇ ವಾದಿ ಸಾಲದ ಹಣವನ್ನು ಕಟ್ಟದೇ ಇದ್ದ ಕಾರಣ ಚಂದ್ರಪ್ಪನು ಆಕೆಯ ವಿರುದ್ದ ಇದೇ ನ್ಯಾಯಾಲಯದಲ್ಲಿ ಹಣ ವಸುಲಾತಿ ದಾವೆಯನ್ನು ಹಾಕಿದ್ದರು ಅಂದರೆ ಸರಿ. ಸಿದ್ದಮ್ಮನ ಸ್ವಂತ ಊರು ಸೊಕ್ಕೆ ಇರುವುದು. ಸೊಕ್ಕೆ ಮತ್ತು ತೂಲಹಳ್ಳಿ ಗ್ರಾಮಗಳು 2-3 ಕಿಮಿ ಅಂತರದಲ್ಲಿ ಇವೆ ಅಂದರೆ ಸರಿ. ಸಿದ್ದಮ್ಮಳು ಸದರಿ ಗ್ರಾಮದ ಶ್ರೀಮತಿ ಕರಿಬಸ್ಸಮ್ಮ ಗಂಡ ಚೆಳ್ಳಿ ಶಿವಕುಮಾರನ ಬಳಿ 1,10,000/- ಸಾಲ ಪಡೆದಿದ್ದರು ಅಂದರೆ ನನಗೆ ಗೊತ್ತಿಲ್ಲ. ಕರಿಬಸ್ಸಮ್ಮಳ ಬಳಿ ಮಾಡಿದ ಸಾಲವನಲ್ನು ತೀರಿಸಲು ಸುಬಾಷಚಂದ್ರನು 3 ನೇ ಷತ್ರಿವಾದಿಯ ಹೆಸರಿಗೆ 1 ನೇ ದಾವಾ ಅಸ್ತಿಗೆ ಸಂಬಂದಿಸಿದಂತೆ ನೊಂದಾಯಿತ ಖರೀದಿ ಪತ್ರವನ್ನು ಬರೆದುಕೊಟ್ಟಿರುವನು ಮತ್ತು ಆ ಕಾಲಕ್ಕೆ ಈ ಮೊದಲು ಮಾಡಿದ್ದ ಖರೀದಿ ಕರಾರು ಪತ್ರವನ್ನು ರದ್ದುಗೊಳಿಸಿದ್ದನು ಅಂದರೆ ನನಗೆ ಗೊತ್ತಿಲ್ಲ. ಗೊತ್ತಿದ್ದರೂ ಗೊತಿಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ

ದಾವಾ ಅಸ್ತಿ ಪೂರ್ವದಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದು ನಾನು ದಾಖಲೆ ನೋಡಿ ತಿಳಿದುಕೊಂಡಿರುವುದಿಲ್ಲ. 1 ನೇ ದಾವಾ ಅಸ್ತಿಯನ್ನು 3 ನೇ ಪ್ರತಿವಾದಿ ಬಿತ್ತಿ ಬೆಳೆದು ಮಾಡುವನು ಅಂದರೆ ನನಗೆ ಗೊತ್ತಿಲ್ಲ. ಸುಬಾಷಚಂದ್ರನಿಗೆ ಮಧ್ಯಪಾನ ಮಾಡುವ ಅಬ್ಯಾಸ ಇತ್ತು. ಆ ರೀತಿ ಸುಳ್ಳು ಹೇಳುತ್ತಿದೇನೆ ಅಂದರೆ ಸರಿಯಲ್ಲ. ಆತನಿಗೆ ಸಕ್ಕರೆ ಕಾಯಿಲೆ ಇತ್ತು ಅಂದರೆ ನನಗೆ ಗೊತ್ತಿಲ್ಲ. ಸಕ್ಕರೆ ಕಾಯಿಲೆ ಉಲ್ಬಣವಾಗಿ ಆತನ ಲಿವರ್ ಡ್ಯಾಮೇಜ್ ಆಗಿ ಅಸ್ಪತ್ರೆಗೆ ಸೇರಿದ್ದನು ಅಂದರೆ ಸರಿ. ಆಸ್ಪತ್ರೆಗೆ ದಾಖಲಾಗುವ ಮೊದಲು ಆತನು ಸಾಕ್ಷಷ್ಟು ಸಾಲ ಮಾಡಿದ್ದನು ಅಂದರೆ ನನಗೆ ಗೊತ್ತಿಲ್ಲ. ಸಾಲವನ್ನು ತೀರಿಸಲು ಸಾಲಗಾರರ ಒತ್ತಡವನ್ನು ತಾಳಲಾರದೇ 1 ನೇ ದಾವಾ ಅಸ್ತಿಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದನು ಅಂದರೆ ನನಗೆ ಗೊತ್ತಿಲ್ಲ. 1 ನೇ ವಾದಿ ಮಾಡಿದ ಸಾಲವನ್ನೂ ಕೂಡ ಸುಬಾಷಚಂದ್ರ ತೀರಿಸಿರುವನು ಅಂದರೆ ಸರಿ.

ನಾನು ವ್ಯವಸಾಯ ಮಾಡುತ್ತೇನೆ ಅಂದರೆ ಸರಿ. ಕೇಸು ತನ್ನ ಪರವಾಗಿ ಆದರೆ ಅದನ್ನು ನನಗೆ ಸಾಗುವಳಿ ಮಾಡಲು ಹೇಳುತ್ತೆನೆ ಎಂದು ಸಿದ್ದಮ್ಮಳು ಅಶ್ವಸನೆ ನೀಡಿ ನನ್ನನ್ನು ಪುಸಲಾಯಿಸಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುವಳು ಅಂದರೆ ಸರಿಯಲ್ಲ. ನನಗೆ ಸಾಕ್ಷಿ ಪ್ರಮಾಣ ಪತರದಲ್ಲಿ ಬೆರೆದಿರುವ ವಿಚಾರಗಳು ಗೊತ್ತಿರುವುದಿಲ್ಲ ಅಂದರೆ ಸರಿ.

ಮರು ವಿಚಾರಣೆ ಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

03-07-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**